Q-72-(39)

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ವೈ.ಎ.ನಾರಾಯಣಸ್ವಾಮಿ, ಇವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

****

**ವಿಷಯ:**

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ "ಚಾಗಲಟ್ಟಿ" ಗ್ರಾಮದ ಕೆರೆಯ ಮಧ್ಯ ಭಾಗದಲ್ಲಿ ಕೆಲವು ಭೂ ಕಬಳಿಕೆದಾರರು, ರಸ್ತೆಯನ್ನು ನಿರ್ಮಿಸಿ, ಕೆರೆಯ ಸ್ವರೂಪವನ್ನು ಬದಲಿಸಿ, ಭೂಕಬಳಿಕೆಯನ್ನು ಮಾಡಿ ತಮ್ಮ ಸ್ವಂತ ಬಡಾವಣೆಗಳಿಗೆ ಹೋಗಲು ಸದರಿ ರಸ್ತೆಯನ್ನು ಉಪಯೋಗಿಸುತ್ತಿದ್ದು, ಸದರಿ ರಸ್ತೆಯನ್ನು ತೆರವುಗೊಳಿಸಿ, ಕೆರೆಯನ್ನು ತಮ್ಮ ಮೂಲ ಸ್ವರೂಪಕ್ಕೆ ತರುವ ಬಗ್ಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

******

**ಉತ್ತರ:-**

ಪ್ರಸ್ತಾಪಿಸಿರುವ ಕೆರೆಯು ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ "ಚಾಗಲಟ್ಟಿ" ಗ್ರಾಮದ ಸರ್ವೆ ನಂಬರ್: 83 ರ ಸ್ಥಳದಲ್ಲಿದ್ದು, ಈ ಕೆರೆಯು ಜಿಲ್ಲಾ ಪಂಚಾಯತ್ ಕೆರೆಯಾಗಿರುತ್ತದೆ.

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ -- 2014 ಹಾಗೂ ತದನಂತರದ ತಿದ್ದುಪಡಿಗಳ ಅಧ್ಯಾಯ – 3 ರ ಪ್ರಕರಣ (6) ರಲ್ಲಿ

*"ಕೆರೆಯ ಒಡ್ಡು ಸೇರಿದಂತೆ ಕೆರೆ ಪ್ರದೇಶದೊಳಗೆ ರಸ್ತೆಗಳನ್ನು, ಸೇತುವೆಗಳನ್ನು ಮತ್ತು ಅದೇ ರೀತಿಯ ಇತರ ರಚನೆಗಳನ್ನು ನಿರ್ಮಿಸತಕ್ಕದ್ದಲ್ಲ. ಪ್ರಾಧಿಕಾರವು, ಅಂಥ ಕಾಮಗಾರಿಯ ತರುವಾಯವೂ ಕೆರೆಗಳ ಮೂಲ ಸಾಮರ್ಥ್ಯವು ಕಡಿಮೆಯಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡ ತರುವಾಯ ಮಾತ್ರವೇ ಅಂಥ ಕಾಮಗಾರಿಗಳಿಗೆ ಅನುಮತಿಯನ್ನು ನೀಡಬಹುದು". ಎಂದು ನಮೂದಿಸಲಾಗಿರುತ್ತದೆ.*

ಸಿ.ಎಂ.ಆರ್. ವಿಶ್ವವಿದ್ಯಾಲಯ ರವರಿಂದ CSR ನಡಿ ಚಾಗಲಟ್ಟಿ ಕೆರೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ತಾಂತ್ರಿಕ ಪರಿಣಿತರಿಂದ ಕೆರೆಯನ್ನು ಪರಿವೀಕ್ಷಣೆ ಮಾಡಿದ ಸಂದರ್ಭದಲ್ಲಿ ಚಾಗಲಟ್ಟಿ ಕೆರೆಯಂಗಳದಲ್ಲಿ ಅನಧಿಕೃತವಾಗಿ 220.00ಮೀ ಉದ್ದದ ರಸ್ತೆಯನ್ನು ನಿರ್ಮಿಸಿದ್ದು ಇದರಿಂದ 4400.00 ಚ.ಮೀ. ಕೆರೆಯಂಗಳ ಅತಿಕ್ರಮವಾಗಿರುತ್ತದೆ. ಈ ಅನಧಿಕೃತ ರಸ್ತೆಯನ್ನು ಕೂಡಲೇ ತೆರವುಗೊಳಿಸಲು ಕ್ರಮವಹಿಸುವಂತೆ ಕೋರಿ ಹಾಗೂ ಕ್ರಮ ಕೈಗೊಂಡ ಬಗ್ಗೆ ವರದಿ ನೀಡಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು ರವರನ್ನು ದಿನಾಂಕ: 18.08.2018ರ ಪತ್ರದಲ್ಲಿ ಕೋರಲಾಗಿತ್ತು. ಈ ಅನಧಿಕೃತ ರಸ್ತೆಯನ್ನು ಕೂಡಲೇ ತೆರವುಗೊಳಿಸಲು ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು ರವರನ್ನು ಕೋರಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದವತಿಯಿಂದ ದಿನಾಂಕ: 25.01.2021 ರಂದು ಪತ್ರ ಬರೆಯಲಾಗಿರುತ್ತದೆ. ಸದರಿ ಪತ್ರಗಳನ್ನು ಅನುಬಂಧ – 1 ರಲ್ಲಿ ಲಗತ್ತಿಸಲಾಗಿದೆ. ಈವರೆಗೆ ಯಾವುದೇ ಕ್ರಮದ ಮಾಹಿತಿ ನೀಡಿರುವುದಿಲ್ಲ.

ಅಲ್ಲದೇ ಈವರೆಗೆ ಯಾವುದೇ ಕ್ರಮವಹಿಸದ ಕಾರಣ ಮತ್ತೊಮ್ಮೆ ಅನಧಿಕೃತ ರಸ್ತೆಯ ತೆರವಿಗೆ ಜಿಲ್ಲಾ ಪಂಚಾಯತ್ ಬೆಂಗಳೂರು ನಗರ ಜಿಲ್ಲೆ ರವರಿಗೆ ಸೂಚಿಸಲಾಗುವುದು.

ದಿನಾಂಕ: 13.01.2021 ರಂದು ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ರವರು ಇದನ್ನು ಪರಿವೀಕ್ಷಿಸಿರುತ್ತಾರೆ. ಈ ವಿಷಯದ ಕುರಿತು ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಜಿಲ್ಲಾ ಪಂಚಾಯತ್ ಬೆಂಗಳೂರು ರವರಿಗೆ ಪತ್ರ ವ್ಯವಹಾರ ನಡೆಸಿದ್ದು. ಸದರಿಯವರಿಂದ ಈವರೆವಿಗೂ ಮಾಹಿತಿ ಸ್ವೀಕೃತವಾಗಿರುವುದಿಲ್ಲ.

**ಕಡತ ಸಂಖ್ಯೆ:MID 149 LCQ 2021**

(ಜೆ.ಸಿ.ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಶಾಸನ ರಚನೆ
ಹಾಗೂ ಸಣ್ಣ ನೀರಾವರಿ ಸಚಿವರು.